ಸಾಕ್ಷಿಯನ್ನು ದಿಃ12.10.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಜಿ ಸಿ ಎಂ ವಕೀಲರಿಂದಃ**

ನನ್ನ ತಾಯಿ ಹೆಸರಿನಲ್ಲಿರುವ ಇನ್ನೊಂದು ಆಸ್ತಿ ಈ ದಾವೆಯಲ್ಲಿ ಸೇರಿಸಿಲ್ಲ ಏಕೆಂದರೆ ಅದು ಪ್ರತ್ಯೇಕ ಸ್ವತ್ತಾಗಿರುತ್ತದೆ. ಸದರಿ ಸ್ವತ್ತಿನ ಖಾತೆ ಹಾಲಿ ನನ್ನ ಹೆಸರಿನಲ್ಲಿ ಇದೆ. ಯಾವ ಆಧಾರದ ಮೇಲೆ ಸದರಿ ಆಸ್ತಿ ನಿಮ್ಮ ಹೆಸರಿಗೆ ಖಾತೆ ಆಗಿದೆ ಎಂದರೆ ಸಾಕ್ಷಿ ನನ್ನ ತಾಯಿ ಹೆಸರಿನಲ್ಲಿತ್ತು ನಂತರ ತನ್ನ ಹೆಸರಿಗೆ ಬಂದಿದೆ . ಸದರಿ ಸ್ವತ್ತು ನನ್ನ ತಾಯಿ ಹೇಳಿದಂತೆ ನನ್ನ ಹೆಸರಿಗೆ ಖಾತೆ ಆಗಿದೆ. ಸದರಿ ಖಾತೆಯು 2019 ರಲ್ಲಿ ಆಗಿರುತ್ತದೆ. ನನ್ನ ತಂದೆಗೆ ವಿಭಾಗದಲ್ಲಿ ಬಂದಿರುವ ಆಸ್ತಿಯು ಅವರ ಹೆಸರಿನಲ್ಲಿಯೇ ಇದೆ. ನನ್ನ ತಂದೆ ಆಸ್ತಿ ಅವರು ಮೃತ ಪಟ್ಟ ನಂತರ ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿಲ್ಲ ಏಕೆಂದರೆ ಸರಿಯಾಗಿ ಭಾಗ ಆಗಿರುವುದಿಲ್ಲ. ನನ್ನ ತಂದೆ ಈಗಾಗಲೇ ಅವರ ಪಾಲಿಗೆ ಬಂದಿರುವ ಆಸ್ತಿಯು ನ್ಯಾಯಯುತವಾಗಿ ಬಂದಿದೆ ಆದ್ದರಿಂದ ಅವರು ಅದನ್ನು ಸಾಗುವಳಿ ಮಾಡುತ್ತಾ ಇದ್ದರು ಅನ್ನುವುದು ಸರಿಯಲ್ಲ. ನನ್ನ ತಂದೆ ತಾನು ಜೀವಂತ ಇರುವವರೆಗೆ ಭಾಗ ಸರಿಯಾಗಿ ಆಗಿಲ್ಲವೆಂದು ಯಾವುದೇ ಪ್ರಕರಣ ನ್ಯಾಯಾಲಯದಲ್ಲಿ ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ತನ್ನ ತಂದೆ ಇದ್ದಾಗಲೇ ಕೇಸು ಹಾಕಿದ್ದೆವು ಎಂದು ತಿಳಿಸುತ್ತಾರೆ. ನನ್ನ ತಂದೆ ಸ್ವತಃ ಯಾವುದೇ ದಾವೆ ಹಾಕಿಲ್ಲ ಆದರೆ ಅವರು ಹೇಳಿದಂತೆ ಭಾಗ ಸರಿಯಾಗಿ ಆಗಿಲ್ಲವೆಂದು ನಾನು ಈ ದಾವೆ ಸಲ್ಲಿಸಿದ್ದೇನೆ.ನನ್ನ ತಂದೆ ಇರುವವರೆಗೆ ಅವರ ಪಾಲಿಗೆ ಬಂದ ಭಾಗ ಸರಿಯಾಗಿದೆ ಎಂದು ಒಪ್ಪಿ ನಾವು ಕೂಡ ಸಾಗುವಳಿ ಮಾಡುತ್ತಾ ಬಂದಿದ್ದೇವೆ ಎಂದರೆ ಸಾಕ್ಷಿ 2 ನೇ ತಾತನ ಭಾಗದ ಆಸ್ತಿಯನ್ನು ಸಾಗುವಳಿ ಮಾಡುತ್ತಿದ್ದೇವೆ ಎಂದು ತಿಳಿಸುತ್ತಾರೆ. ನಮ್ಮ ತಂದೆಗೆ ಬರಬೇಕಾದ ಭಾಗವನ್ನು ಈಗಾಗಲೇ ನ್ಯಾಯಯುತವಾಗಿ ಕೊಡಲಾಗಿದೆ ಎಂದರೆ ಸರಿಯಲ್ಲ. ಅದನ್ನು ಒಪ್ಪಿ ನನ್ನ ತಂದೆ ಪಾಲುವಿಭಾಗ ಪತ್ರಕ್ಕೆ ಸಹಿ ಮಾಡಿದ್ದಾರೆ ಹಾಗಾಗಿ ಸದರಿ ದಾಖಲೆ

ಪ್ರಶ್ನಿಸುವ ಹಕ್ಕು ನನಗಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ 1996 ರಲ್ಲಿ ಅವರಿಗೆ ಬಂದ ಆಸ್ತಿ ಸರಿಯಾಗಿದೆ ಎಂದು ಒಪ್ಪಿ ಸಾಯುವವರೆಗೆ ಸಾಗುವಳಿ ಮಾಡುತ್ತಾ ಅದನ್ನೇ ನಮಗೂ ಬಿಟ್ಟು ಹೋಗಿದ್ದಾರೆ ಎಂದರೆ ಸರಿಯಲ್ಲ. ಸಮುದ್ರದಳ್ಳಿ ಗ್ರಾಮದ ಸರ್ವೆ ನಂ.222 ಇದನ್ನು ಎಲ್ಲಾ ಸಹೋದರರು ಸೇರಿ ಮಾರಾಟ ಮಾಡಿ ಬಂದ ಹಣವನ್ನು ಸಂಪೂರ್ಣವಾಗಿ ಭದ್ರಪ್ಪ ಪಡೆದಿದ್ದರಿಂದ ದಾವಾ ಸರ್ವೆ ನಂಬರಿನಲ್ಲಿ ಕಡಿಮೆ ಜಮೀನು ಬಂದಿದೆ ಎಂದರೆ ಸರಿಯಲ್ಲ. ದಾಸಪ್ಪನ ಹೆಂಡತಿ ಬರೆದಿರುವ ಮರಣ ಶಾಸನದ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸದರಿ ವಿಷಯ ಗೊತ್ತಿದ್ದಕ್ಕೆ ಭದ್ರಪ್ಪ ಯಾವುದೇ ಆಸ್ತಿಯನ್ನುಕೇಳಿಲ್ಲ ಮತ್ತು 1996 ನ ವಿಭಾಗ ಪತ್ರವನ್ನು ಒಪ್ಪಿಕೊಂಡಿದ್ದ ಎಂದರೆ ಸರಿಯಲ್ಲ 1996 ರಲ್ಲಿ ಆಗಿರುವ ವಿಭಾಗ ಪತ್ರವು ನ್ಯಾಯಯುತವಾಗಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡಲು ವಿನಾ ಕಾರಣ ಈ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣದಿಂದಲೇ ಭದ್ರಪ್ಪ ತಾನು ತನ್ನ ಜೀವಿತಾವಧಿಯಲ್ಲಿ ಸದರಿ ವಿಭಾಗವನ್ನು ಪ್ರಶ್ನಿಸಿ ಮತ್ತು ಇನ್ನೂ ಜಮೀನು ಬರಬೇಕೆಂದು ಯಾವುದೇ ದಾವೆ ಹಾಕಿರಲಿಲ್ಲ ಎಂದರೆ ಸರಿಯಲ್ಲ.

**ಶ್ರೀ ಕೆ ಪಿ ಎ ವಕೀಲರು ಶ್ರೀ ಜೆ ಸಿ ಎಂ ವಕೀಲರು ಮಾಡಿದ ಪಾಟೀ ಸವಾಲನ್ನೇ ಅನುಕರಿಸುತ್ತೇನೆ ಎಂದು ತಿಳಿಸಿರುತ್ತಾರೆ.**

**ಶ್ರೀ ಕೆ ಆರ್ ಡಿ ವಕೀಲರು 13 ರಿಂದ 19 ನೇ ಪ್ರತಿವಾದಿ ಪರವಾಗಿ ಪಾಟೀ ಸವಾಲು ಇಲ್ಲ ಎಂದು ತಿಳಿಸುತ್ತಾರೆ.**

**ಪಿ ಡಬ್ಲ್ಯೂ- 1**

**ಡಿ-1(ಎ) ಮತ್ತು ಅವರ ವಕೀಲರನ್ನು ಕೂಗಿಸಲಾಯಿತು ಗೈರು ಹಾಜರಿರುತ್ತಾರೆ ಆದ್ದರಿಂದ ಈ ಪ್ರತಿವಾದಿ ಪರವಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.